ಕರ್ನಾಟಕ ಸರ್ಕಾರ

ಕೃಷಿ ಇಲಾಖೆ

ಸಂಖ್ಯೆ: ಉಕೃನಿ/ಸಾಕೃಘ/ಸಾ.ಭಾ.ಯೋ./ಸು./2013-14

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ , ಬೆಂಗಳೂರು
ದಿನಾಂಕ: 10-02-2014

**ಸಾವಯವ ಭಾಗ್ಯ ಸುತ್ತೋಲೆ-1**

**ವಿಷಯ:** ಹೋಬಳಿ ಮಟ್ಟದ ಸಾವಯವ ಭಾಗ್ಯ ಯೋಜನೆಯ ಅನುಷ್ಠಾನದ ಚಾಲನೆ ಬಗ್ಗೆ

**ಉಲ್ಲೇಖ:** 1. ಸರ್ಕಾರಿ ಆದೇಶ ಸಂಖ್ಯೆ: ಕೃಇ/30/ಕೃಯೋಕಾ/2013, ದಿ: 19-08-2013

2. ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಎಸಿಎ/ಬಿಜಿಟಿ/104-12/ಅಬಿ/2013-14, ದಿ:27-01-2014

*********

"ಸಾವಯವ ಭಾಗ್ಯ ಯೋಜನೆ" ಯನ್ನು ಪ್ರಸ್ತುತ ಸಾವಯವ ಗ್ರಾಮ/ಸ್ಥಳ ವಿಸ್ತರಣೆ ಯೋಜನೆ ಚಾಲ್ತಿಯಲ್ಲಿರುವ 176 ಹೋಬಳಿಗಳನ್ನು ಹೊರತುಪಡಿಸಿ ರಾಜ್ಯದ ಉಳಿದ 571 ಹೋಬಳಿಗಳಲ್ಲಿ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ತಾಲ್ಲೂಕುವಾರು ಆಯ್ಕೆಯಾದ ಸರ್ಕಾರೇತರ ಸಂಸ್ಥೆಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು. ಯೋಜನೆಯ ಅನುಷ್ಠಾನಕ್ಕೆ ಚಾಲನೆ ನೀಡಲು ತುರ್ತಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

1. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಯೋಜನೆಯ ಅನುಷ್ಠಾನಕ್ಕಾಗಿ ಪ್ರತಿ ತಾಲ್ಲೂಕಿನಲ್ಲಿ ಆಯ್ಕೆಯಾದ ಸರ್ಕಾರೇತರ ಸಂಸ್ಥೆಗಳೊಂದಿಗೆ ಒಂದು ವರ್ಷದ ಅವಧಿಗೆ ರೂ.100/- ನಾನ್ ಜುಡಿಷಿಯಲ್ ಸ್ಟಾಂಪ್ ಪೇಪರ್ ಮೇಲೆ ಒಪ್ಪಂದ ಮಾಡಿಕೊಳ್ಳುವುದು. ಮಾದರಿ ಒಪ್ಪಂದದ ನಮೂನೆಯನ್ನು **ಅನುಬಂಧ**-1 ರಲ್ಲಿ ನೀಡಲಾಗಿದೆ.
2. ಆಯ್ಕೆಯಾದ ಸರ್ಕಾರೇತರ ಸಂಸ್ಥೆಗಳು ಪ್ರತಿ ತಾಲ್ಲೂಕಿಗೆ ವಾರ್ಷಿಕ ತಾವು ಪಡೆಯುವ ಆಡಳಿತ ಮತ್ತು ಸೇವಾ ವೆಚ್ಚದ ಶೇ.5 ರಷ್ಟನ್ನು ಭದ್ರತಾ ಠೇವಣಿಯಾಗಿ ಬ್ಯಾಂಕ್ ಗ್ಯಾರಂಟಿ (ಕನಿಷ್ಟ 15 ತಿಂಗಳ ಅವಧಿಯ) ರೂಪದಲ್ಲಿ ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಸರ್ಕಾರೇತರ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನಕ್ಕಾಗಿ ಪಾವತಿಸಲಿರುವ ಆಡಳಿತ ಮತ್ತು ಸೇವಾ ವೆಚ್ಚದ ವಿವರಗಳು ಮತ್ತು ಬ್ಯಾಂಕ್ ಗ್ಯಾರಂಟಿ ಪಡೆಯಬೇಕಾದ ಮೊತ್ತದ ವಿವರಗಳನ್ನು **ಅನುಬಂಧ**-2 ರಲ್ಲಿ ನೀಡಲಾಗಿದೆ.
3. ಯೋಜನೆಯಡಿಯಲ್ಲಿ ಸರ್ಕಾರೇತರ ಸಂಸ್ಥೆಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು **ಅನುಬಂಧ**-3ರಲ್ಲಿ ನೀಡಲಾಗಿದೆ.
4. ಯೋಜನೆ ಅನುಷ್ಠಾನಕ್ಕಾಗಿ ಸರ್ಕಾರೇತರ ಸಂಸ್ಥೆಯು ತಾಲ್ಲೂಕಿನ ಪ್ರತಿ ಮೂರು ಹೋಬಳಿಗೆ ಒಬ್ಬರಂತೆ ಕ್ಷೇತ್ರಾಧಿಕಾರಿಯನ್ನು, ಪ್ರತಿ ಹೋಬಳಿಗೆ ಒಬ್ಬರು ಕ್ಷೇತ್ರ ಸಹಾಯಕರನ್ನು ನೇಮಿಸುವುದು. ಕ್ಷೇತ್ರಧಿಕಾರಿಯು ಬಿ.ಎಸ್ಸಿ. (ಕೃಷಿ) ಪದವಿ ಅಥವಾ ಕೃಷಿ/ಸಾವಯವ ಕೃಷಿಯಲ್ಲಿ ಡಿಪ್ಲೊಮಾ ಹೊಂದಿರುವುದು ಅಪೇಕ್ಷಣೀಯ. ಈ ವಿದ್ಯಾರ್ಹತೆಯ ಅಭ್ಯರ್ಥಿಗಳು ದೊರಕದಿದ್ದಲ್ಲಿ ಕ್ಷೇತ್ರಾಧಿಕಾರಿಯು ಕನಿಷ್ಠ ಪದವಿ ಹೊಂದಿದ್ದು, ಸಾವಯವ ಕೃಷಿಯಲ್ಲಿ ಕನಿಷ್ಠ ಎರಡು ವರ್ಷಗಳ ಅನುಭವ ಹೊಂದಿರಬೇಕು. ಕ್ಷೇತ್ರ ಸಹಾಯಕರು ಕನಿಷ್ಠ S.S.L.C.(ತತ್ಸಮಾನ ವಿದ್ಯಾರ್ಹತೆ) ಯಲ್ಲಿ ಪಾಸಾಗಿರಬೇಕು. ಆಯ್ಕೆಯಾದ ಕ್ಷೇತ್ರಾಧಿಕಾರಿಯು ಸಂಬಂಧಪಟ್ಟ ತಾಲ್ಲೂಕಿನಲ್ಲಿ ಹಾಗೂ ಕ್ಷೇತ್ರ ಸಹಾಯಕರು ಸಂಬಂಧಪಟ್ಟ ಹೋಬಳಿಯಲ್ಲಿ ವಾಸ್ತವ್ಯ ಹೊಂದುವುದು ಅವಶ್ಯಕ. ಯಾವುದೇ ತಾಲ್ಲೂಕಿನಲ್ಲಿ ಮೂರಕ್ಕಿಂತ ಹೆಚ್ಚಿನ ಹೋಬಳಿಗಳಿದ್ದಲ್ಲಿ ಯೋಜನೆ ಅನುಷ್ಠಾನಕ್ಕೆ ಸರ್ಕಾರೇತರ

ಸಂಸ್ಥೆಯು ಇಬ್ಬರು ಕ್ಷೇತ್ರಾಧಿಕಾರಿಗಳ ಸೇವೆಯನ್ನು ಒದಗಿಸುವುದು. ಹೆಚ್ಚಿನ ಹೋಬಳಿಗಳಿದ್ದರೂ ಸಹ ಒಂದು ತಾಲ್ಲೂಕಿಗೆ ಗರಿಷ್ಠ ಇಬ್ಬರು ಕ್ಷೇತ್ರಾಧಿಕಾರಿಗಳ ಸೇವೆಯೊಂದಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಕ್ಷೇತ್ರಾಧಿಕಾರಿಗಳಿಗೆ ಕಂಪ್ಯೂಟರ್ ಜ್ಞಾನ ಕಡ್ಡಾಯ(Online ನಲ್ಲಿ ಪ್ರಗತಿ ವರದಿಯನ್ನು ಕಳುಹಿಸಲು). ಹೋಬಳಿಗಳ ಸಂಖ್ಯೆಗೆ ಅನುಸಾರವಾಗಿ ನೇಮಿಸಬೇಕಾಗಿರುವ ಕ್ಷೇತ್ರಾಧಿಕಾರಿಗಳು ಹಾಗೂ ಕ್ಷೇತ್ರ ಸಹಾಯಕರ ಸಂಖ್ಯೆಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.

5. ಯೋಜನೆ ಅನುಷ್ಠಾನಕ್ಕಾಗಿ ಸರ್ಕಾರೇತರ ಸಂಸ್ಥೆಗಳು ತಾಲ್ಲೂಕುವಾರು ಕ್ಷೇತ್ರಾಧಿಕಾರಿಗಳು ಮತ್ತು ಕ್ಷೇತ್ರ ಸಹಾಯಕರ ಪಟ್ಟಿಯನ್ನು ದಿನಾಂಕ: 10-2-2014ರೊಳಗೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಮತ್ತು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಮಾರ್ಚ್-2014 ರ ಮಾಹೆಯಲ್ಲಿ ಕ್ಷೇತ್ರಾಧಿಕಾರಿಗಳಿಗೆ ಮತ್ತು ಕ್ಷೇತ್ರ ಸಹಾಯಕರಿಗೆ ಕೃಷಿ ವಿಶ್ವ ವಿದ್ಯಾನಿಲಯಗಳ ವತಿಯಿಂದ ಸಾವಯವ ಕೃಷಿಯಲ್ಲಿ ತರಬೇತುದಾರರ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗುವುದು.

6. ಯೋಜನೆ ಅನುಷ್ಠಾನಕ್ಕಾಗಿ ತಾಲ್ಲೂಕಿನ ಪ್ರತಿ ಹೋಬಳಿಯಲ್ಲಿ(ಪ್ರಸ್ತುತ ಯೋಜನೆ ಚಾಲ್ತಿಯಲ್ಲಿರುವ 176 ಹೋಬಳಿಗಳನ್ನು ಹೊರತುಪಡಿಸಿ) 100 ಹೆ. ಪ್ರದೇಶವನ್ನು ಗುರುತಿಸುವುದು. ಅನುಷ್ಠಾನ ಪ್ರದೇಶ/ಸ್ಥಳದ ಆಯ್ಕೆ ಮಾನದಂಡಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ. ಸರ್ಕಾರೇತರ ಸಂಸ್ಥೆ ಮತ್ತು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಜಂಟಿಯಾಗಿ ಸ್ಥಳ ಆಯ್ಕೆ ಮಾಡುವುದು. ದಿನಾಂಕ: 15-2-2014ರೊಳಗೆ ಸ್ಥಳ ಆಯ್ಕೆ ಮಾಡಿ, ಆಯ್ಕೆ ಮಾಡಲಾದ ಗ್ರಾಮ / ಸ್ಥಳಕ್ಕೆ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಚಾಲನಾ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಕೇಂದ್ರ ಕಛೇರಿಗೆ ಕಳುಹಿಸಿಕೊಡುವುದು.

7. ಯೋಜನೆಯ ಅನುಷ್ಠಾನಕ್ಕೆ ಸ್ಥಳ ಆಯ್ಕೆ ನಂತರ ಸರ್ಕಾರೇತರ ಸಂಸ್ಥೆಗಳು ಅನುಷ್ಠಾನ ಸ್ಥಳದ - ಫಲಾನುಭವಿಗಳನ್ನು ಗುರುತಿಸಿ, ಫಲಾನುಭವಿಗಳ ವಿವರವಾದ ಪ್ರಾಥಮಿಕ ಸಮೀಕ್ಷೆ ಕೈಗೊಳ್ಳುವುದು (Bench Mark Survey). ಪ್ರಾಥಮಿಕ ಸಮೀಕ್ಷೆ ನಮೂನೆಯನ್ನು **ಅನುಬಂಧ- 5** ರಲ್ಲಿ ನೀಡಲಾಗಿದೆ. ಸರ್ಕಾರೇತರ ಸಂಸ್ಥೆಗಳು ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿಕೊಂಡು ದಿ:28-2-2014 ರೊಳಗೆ ಪ್ರಾಥಮಿಕ ಸಮೀಕ್ಷೆ ಕಾರ್ಯವನ್ನು ಮುಗಿಸುವುದು. ಫಲಾನುಭವಿವಾರು ವಿವರವಾದ ಪ್ರಾಥಮಿಕ ಸಮೀಕ್ಷಾ ವರದಿಗಳನ್ನು ಮತ್ತು ಯೋಜನಾ ಪ್ರದೇಶದ ಕ್ರೋಢೀಕೃತ ವರದಿಯನ್ನು ಸಂಬಂಧಪಟ್ಟ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು ಮತ್ತು ಸರ್ಕಾರೇತರ ಸಂಸ್ಥೆಗಳು ಸಹ ತಮ್ಮ ಕಛೇರಿಯಲ್ಲಿ ನಿರ್ವಹಿಸುವುದು. ಎಲ್ಲಾ ಹೋಬಳಿಗಳ ತಾಲ್ಲೂಕುವಾರು ಕ್ರೋಢೀಕೃತ ಪ್ರಾಥಮಿಕ ಸಮೀಕ್ಷಾ ವರದಿಯನ್ನು ಸರ್ಕಾರೇತರ ಸಂಸ್ಥೆಗಳು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು. ಜಿಲ್ಲಾ ಸಾವಯವ ಕೃಷಿ ಸಮನ್ವಯ ಅಧಿಕಾರಿಗಳು ಜಿಲ್ಲೆಯ ಎಲ್ಲಾ ಹೋಬಳಿಗಳ ತಾಲ್ಲೂಕುವಾರು ಕ್ರೋಢೀಕೃತ ವರದಿಗಳನ್ನು ನಿರ್ವಹಿಸುವುದು.

8. ಯೋಜನಾ ಪ್ರದೇಶದ ಫಲಾನುಭವಿ ರೈತರನ್ನು ಸಂಘಟನೆಗೊಳಿಸಿ ಗುಂಪು ರಚಿಸಿ, ಈ ಗುಂಪನ್ನು ನೊಂದಾಯಿಸುವುದು(Karnataka Societies Registration Act-1960 ಅಡಿಯಲ್ಲಿ). ಗುಂಪು ನೊಂದಣಿಗಾಗಿ ರೂ. 4000/- ಅನುದಾನವನ್ನು ಬಳಸಿಕೊಳ್ಳಲು ಕ್ರಿಯಾಯೋಜನೆಗೆ ನೀಡಲಿರುವ ಅನುದಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. ಕ್ರಿಯಾಯೋಜನೆ ಅನುಷ್ಠಾನಕ್ಕಾಗಿ ಸದರಿ ಗುಂಪಿನ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆಯುವುದು. ಈ ಖಾತೆಯನ್ನು ರೈತರ ಗುಂಪಿನ ಅಧ್ಯಕ್ಷರು, ಸರ್ಕಾರೇತರ ಸಂಸ್ಥೆಯ ಕ್ಷೇತ್ರಾಧಿಕಾರಿ ಮತ್ತು ಇಲಾಖೆಯ ಸ್ಥಳಾಧಿಕಾರಿ ಜಂಟಿಯಾಗಿ ನಿರ್ವಹಿಸುವುದು. ಸಂಬಂಧಪಟ್ಟ ತಾಲ್ಲೂಕಿನಲ್ಲಿ ಇಬ್ಬರು ಕ್ಷೇತ್ರಾಧಿಕಾರಿಗಳು ಇದ್ದಲ್ಲಿ, ಬ್ಯಾಂಕ್ ಖಾತೆ ನಿರ್ವಹಣೆಗಾಗಿ ಒಬ್ಬ ಕ್ಷೇತ್ರಾಧಿಕಾರಿಯನ್ನು ಸರ್ಕಾರೇತರ ಸಂಸ್ಥೆಯು ನಿಯೋಜಿಸುವುದು.

9. ಪ್ರಾಥಮಿಕ ಸಮೀಕ್ಷೆಗಾಗಿ ಪ್ರತಿ ಹೋಬಳಿಗೆ ರೂ. 20,000/- ಅನುದಾನ ಒದಗಿಸಿದ್ದು, ಪ್ರಾಥಮಿಕ ಸಮೀಕ್ಷಾ ವರದಿಗಳನ್ನು ಸಲ್ಲಿಸಿದ ನಂತರ ಸರ್ಕಾರೇತರ ಸಂಸ್ಥೆಗಳಿಗೆ ನೇರವಾಗಿ ಈ ಅನುದಾನವನ್ನು ಪಾವತಿಸಲು ಕ್ರಮ ಕೈಗೊಳ್ಳುವುದು.

10. ಪ್ರತಿ ಹೋಬಳಿಗೆ ಯೋಜನೆ ಅನುಷ್ಠಾನಕ್ಕಾಗಿ ಆಯಾ ವ್ಯಾಪ್ತಿಯ ಸ್ಥಳಾಧಿಕಾರಿಯನ್ನು(Site Officer) ಕೂಡಲೇ ಆಯ್ಕೆ ಮಾಡುವುದು(ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿ). ಈ ಅಧಿಕಾರಿಗಳಿಗೆ ಸಾವಯವ ಕೃಷಿಯ ಬಗ್ಗೆ ಕೃಷಿ ವಿಶ್ವ ವಿದ್ಯಾನಿಲಯದ ವತಿಯಿಂದ ಸೂಕ್ತವಾದ ತರಬೇತಿ ನೀಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಹಾಗೂ ಈ ಅಧಿಕಾರಿಗಳು ಜಂಟಿಬ್ಯಾಂಕ್ ಖಾತೆ ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತಾರೆ.

11. ಉಲ್ಲೇಖ-2 ಅನ್ವಯ ಯೋಜನೆಯಡಿ ಪ್ರಾಥಮಿಕ ಸಮೀಕ್ಷೆ ಕೈಗೊಳ್ಳಲು(ಪ್ರತಿ ಹೋಬಳಿಗೆ ರೂ.20,000/- ದಂತೆ) ಹಾಗೂ ಪೂರ್ವಭಾವಿ ಕೆಲಸ/ಕಾರ್ಯಗಳಿಗಾಗಿ ಜ.ಕೃ.ನಿ(ಪ್ರತಿ ತಿಂಗಳೀಗೆ ರೂ 3000/- ದಂತೆ ಮೂರು ತಿಂಗಳಿಗೆ) ಹಾಗೂ ಸ.ಕೃ.ನಿ. (ಪ್ರತಿ ತಾಲ್ಲೂಕಿಗೆ ತಿಂಗಳಿಗೆ ರೂ.1000/ದಂತೆ ಮೂರು ತಿಂಗಳಿಗೆ) ಕಛೇರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಪೂರ್ವಭಾವಿ ಕೆಲಸ ಕಾರ್ಯಗಳಿಗೆ ಜ.ಕೃನಿ/ಸ.ಕೃ.ನಿ ಕಛೇರಿಗಳಿಗೆ ಬಿಡುಗಡೆ ಮಾಡಿರುವ ಅನುದಾನದಲ್ಲಿ ಸರ್ಕಾರೇತರ ಸಂಸ್ಥೆಗಳ ಪರಿಶೀಲನೆಗಾಗಿ ಅರ್ಜಿಗಳ ಜೆರಾಕ್ಸ್/ಪ್ರಿಂಟ್‌ಔಟ್, ಕ್ಷೇತ್ರ ಭೇಟಿ ವೆಚ್ಚ, ಸಭೆ ವೆಚ್ಚ ಈ ಮುಂತಾದ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ.

ಕೃಷಿ ನಿರ್ದೇಶಕರು ಹಾಗೂ
ಸಾವಯವ ಕೃಷಿ ಸಲಹಾ ಸಮಿತಿಯ ಅಧ್ಯಕ್ಷರು